International Journal of Kannada Research
www.kannadajournal.com

**ISSN: 2454–5813**
IJKR 2019; 5(2): 29-32
© 2019 IJKR
www.kannadajournal.com
Received: 19-02-2019
Accepted: 22-03-2019

**ಶ್ರೀ ಪುರುಷೋತ್ತಮ**
ಎಂ.ಎ, ಎಂ.ಫಿಲ್ ಪಿಹೆಚ್.ಡಿ
ಸಂಶೋಧನಾರ್ಥಿ ಜಾನಪದ
ಸಾಹಿತ್ಯ ವಿಭಾಗ ಕರ್ನಾಟಕ
ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ, ಶಿಗ್ಗಾವಿ ತಾಲ್ಲೂಕು,
ಹಾವೇರಿ ಜಿಲ್ಲೆ

**Correspondence**
**ಶ್ರೀ ಪುರುಷೋತ್ತಮ**
ಎಂ.ಎ, ಎಂ.ಫಿಲ್ ಪಿಹೆಚ್.ಡಿ
ಸಂಶೋಧನಾರ್ಥಿ ಜಾನಪದ
ಸಾಹಿತ್ಯ ವಿಭಾಗ ಕರ್ನಾಟಕ
ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ, ಶಿಗ್ಗಾವಿ ತಾಲ್ಲೂಕು,
ಹಾವೇರಿ ಜಿಲ್ಲೆ

# ಬೇಡಗಂಪಣನ ಐತಿಹಾಸಿಕ ಹಿನ್ನಲೆ :ಒಂದು ಅಧ್ಯಯನ ಬೇಡಗಂಪಣನ ಪೂರ್ವಜರ ಹಿನ್ನೆಲೆ

**ಶ್ರೀ ಪುರುಷೋತ್ತಮ**

ಬೇಡಗಂಪಣ ಎಂಬ ಪದವು ವ್ಯಾಧ ಎಂಬ ಸಂಸ್ಕೃತದ ಪದದ ಸಮನಾರ್ಥವಾಗಿದೆ, ಬೇಡಗಂಪಣ ಅಥವ ವ್ಯಾಧ ಎಂದರೆ ಬೇಟೆಗಾರ ಎಂದು ಅರ್ಥ.ಕರ್ನಾಟಕದಲ್ಲಿ ನಾಯಕ ಎಂಬ ಪದಕ್ಕೆ 17 ಪರ್ಯ್ಯಾಯವಾದ ಪದಗಳಿವೆ. ಅವುಗಳಲ್ಲಿ ಬೇಡಗಂಪಣ, ತಳವಾರ, ಕಿರಾತಕ, ಶಬರ, ಪುಳಿಂದ, ವಾಲ್ಮೀಕಿ ಮಕ್ಕಳು, ಬಾರ್ಕಿ, ವೇದನ, ಕನ್ನಯ್ಯ, ಕುಲಪಾಳೆಯಗಾರರು ಮುಂತಾದವುಗಳು ಈ ಹೆಸರುಗಳಿಗೆ ಸಂಬಂಧಿಸಿದಂತೆ ಒಂದೊಂದು ಕತೆಗಳಿವೆ ಅವರ ಜನಾಂಗ ಪರಿಚಯ ಇವರಿಗೆ ಸಂಬಂಧಿಸಿದ ಕತೆಗಳನ್ನು ಕೊಟ್ಟಿದ್ದಾರೆ.

ಬೇಡಗಂಪಣ ಎಂಬುದು ಉರ್ದು ಪದ 1970ರಲ್ಲಿ ಆದಿಲ್ಶಾಹಿಯ ಬಳಿ ಬೇಡಗಂಪಣ ತಮ್ಮ ಅಲ್ಪ ಪ್ರಮಾಣದ ಸೈನದಿಂದ ಮೊಗಲ್ ಸೈನ್ಯವನ್ನು ಧೈರ್ಯದಿಂದ ಸಾಹಸದಿಂದ ಎದುರಿಸಿದ್ದನ್ನು ಕಂಡು ಔರಂಗಜೇಬನು ಎ ಕಿಸಿಸೆ ನಹಿ ಡರೆನೇ ವಾಲೆಲೋಗ್ ಎಂದು ನುಡಿದನು (ಅದೇ 1988) ಆದ ಕಾರಣ ಉರ್ದುವಿನಲ್ಲಿ ಬೇಡರ್ ಎಂದೇ ಇವರನ್ನು ಕರೆಯುತ್ತಾರೆ. ರಾಮಾಯಣವನ್ನು ರಚಿಸಿದ ಆದಿಕವಿ ವಾಲ್ಮೀಕಿಯು ಬೇಡರವನು ಆದ್ದರಿಂದವರು ತಮ್ಮನ್ನು ವಾಲ್ಮೀಕಿ ಅಥವ ವಾಳ್ಮೀಕಿ ಮಕ್ಕಳು ಎಂದು ಕರೆದುಕೊಳ್ಳುತ್ತಾರೆ.ಅಂತೆಯೇ 63 ಶಿವಭಕ್ತರಲ್ಲಿ ಒಬ್ಬನಾದ ಬೇಡಗಂಪಣನನ್ನು ತಮ್ಮ ಜಾತಿಯವನೇ ಎಂದು ಅವನ ಹೆಸರನ್ನೇ ತಮ್ಮ ಕುಲಕ್ಕಿಟ್ಟುಕೊಂಡು ಕನ್ನಯ್ಯನ ಮಕ್ಕಳು ಎಂದು ಕರೆದುಕೊಳ್ಳುತ್ತಾರೆ.(ಎಂ.ಪಿವೀಣಾ (ಸಂ) 'ಬೇಡಜನಾಂಗದ ಹಿನ್ನೆಲೆ' ಪು. 192).

ಸದಾ ಸುಸಜ್ಜಿತ ಸೈನ್ಯವನ್ನು ಹೊಂದಿ, ದಂಡಿನೊಡನೆ ಪಾಳವನ್ನು ಹಾಕಿ ಇಳಿದುಕೊಂಡು ಕದನಕ್ಕೆ ಸಿದ್ಧನಾಗಿ ರತಕ್ಕೆವರಿಗೆ ಪಾಳೆಯಗಾರರೆಂದು ಕರೆಯುತ್ತಾರೆ.ಪಾಳೆಯಗಾರರಲ್ಲಿ ಬೇಡಗಂಪಣರ ಸಂಖ್ಯೆ ಹೆಚ್ಚಾಗಿರುವ ಕಾರಣ ಇವರು ತಮ್ಮನ್ನು ಪಾಳೆಯಗಾರು ಎಂದು ಕರೆದುಕೊಂಡಿರಬೇಕು.ಹಿಂದೆಯೇ ಪಾಳೆಯಗಾರರ ಮನೆತನಗಳಿದ್ದರೂ ಈ ಕಾಲದಲ್ಲಿಯೇ ಇವರು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡರು ರಕ್ಕಸ–ತಂಗಡಿ ಕದನದ ಅನಂತರ ಸ್ವತಂತ್ರವಾಗಿ ಪಾಳೆಯ ಪಟ್ಟುಗಳಲ್ಲಿ ಆಳ್ವಿಕೆ ನಡೆಸಿದರು.ಬ್ರಿಟಿಷರ ಆಗಮನದಿಂದ ಇವರ ಅಧಿಕಾರ ಮೊಟಕಾಯಿತು.

ನಾಯಕ ಎಂಬ ಪದವನ್ನು ಕುರಿತು ಚಿತ್ರಲಿಂಗಯ್ಯ ಎಂ.ವಿ. ಅವರು ವಿವರಣಾತ್ಮಕವಾದ ಮಾಹಿತಿ ಒದಗಿಸಿದ್ದಾರೆ.ನಾಯಕಾಚಾರ್ಯ ಶ್ರೀ ಮಾನ್ಯ ಹಾನಾಯಕಾಚಾರ್ಯ ನಾಯಕ ನಾರಾಯಣ ನಾಯಕ ಶಿರೋಮಣಿ, ನಾಯಕ ಶಿಖಾಮಣಿ, ನಾಯಕಮಣಿ ಮುಂತಾದ ಬಿರುದುಗಳನ್ನು ಪಡೆದುಕೊಂಡಿದ್ದ ಬೇಡ ಬೇಡಗಂಪಣ ಜನಾಂಗದ ಪಾಳೆಗಾರರು ತಮ್ಮನ್ನು ನಾಯಕ ಜಾತಿಯವರು ಎಂದು ಅರ್ಥ ಬರುವಂತೆ ಕರೆದುಕೊಂಡಿದ್ದಾರೆ.ಕ್ರಿ.ಶ. 9ನೆಯ ಶತಮಾನದಲ್ಲಿ ಮೊತ್ತ ಮೊದಲು ಕಾಣಿಸಿಕೊಳ್ಳುವ ನಾಯಕ, ಎಂಬ ಪದ ಜಾತಿ ಸೂಚಕವಲ್ಲ ಗೌರವ ಸೂಚಕ ಅಥವ ಅಧಿಕಾರ ಸೂಚಕ ಪದ ಅನಂತರ ಕನ್ನಡನಾಡಿನ ಚರಿತ್ರೆಯಲ್ಲಿ ಬೇಡಗಂಪಣ ನಿರಂತರ ಪ್ರಸಿದ್ಧಿಯಿಂದಾಗಿ ಅವರ ನಾಯಕ ಪದವು ಜಾತಿ ಸೂಚಕವಾಗಿದೆ.ನಾಯಕ ಎಂಬ ಉಪನಾಮವು ಬೇಡಗಂಪಣ ಎಂಬ ಉಪನಾಮಗಳು ಬಳಕೆಯಲ್ಲಿದ್ದವು.ತೆಲುಗಿನಲ್ಲಿ ಇಂದಿಗೂ ಬೇಡಗಂಪಣ ಬಾಯೊಡ/ಬಾಯೊಳ್ಳು ಎಂದು ಕರೆಯುತ್ತಾರೆ.

ಮಹಾಕಾವ್ಯಗಳಲ್ಲಿ ಮತ್ತು ಪುರಾಣಗಳಲ್ಲಿ ವಾಲ್ಮೀಕಿ ಬೇಡಗಂಪಣನ ಶಬರ, ಶಬರಿ, ಏಕಲವ್ಯ, ಕಿರಾತ, ಧರ್ಮವ್ಯಾದ, ಮೂನಾಯಕ ಇವರೆಲ್ಲ ಬೇಡಗಂಪಣ ಜನಾಂಗಕ್ಕೆ ಸೇರಿದವರು ಎಂದು ಹೇಳುವ ಕಥೆಗಳು ದೊರೆಯುತ್ತವೆ. ಕರ್ನಾಟಕದ ಇತಿಹಾಸದ ಉದ್ದಕ್ಕೂ ಬೇಡಗಂಪಣ ಧೈರ್ಯ, ಸಾಹಸದ ವರ್ಣನೆ ಕಂಡುಬರುತ್ತದೆ. ಏಟಿಚಿಟಿಟಚಿಟ ಅವರು ತಮ್ಮ ಕೃತಿಯಲ್ಲಿ ಬನವಾಸಿಯ ಕದಂಬರು

ಬೇಡಗಂಪಣ ಜಾತಿಗೆ ಸೇರಿದವರೆಂದು ಅಭಿಪ್ರಾಯಪಟ್ಟಿದ್ದಾರೆ.ಅರಣ್ಯದಲ್ಲಿ ತಮ್ಮದೇ ಆದ ಸ್ವತಂತ್ರ ಗಣರಾಜ್ಯಗಳನ್ನು ಕಟ್ಟಿಕೊಂಡು ಆಳ್ವಿಕೆ ನಡೆಸುತ್ತಿದ್ದ ಬೇಡಗಂಪಣನ ಯುದ್ಧ ಕಾಲದಲ್ಲಿ ಮಾತ್ರ ರಾಜರಿಗೆ ಸೈನಿಕ ಸಹಾಯವನ್ನು ನೀಡುತ್ತಿದ್ದ ಉಲ್ಲೇಖ ದೊರೆಯುತ್ತದೆ.ಕರ್ನಾಟಕ ಚರಿತ್ರೆಯಲ್ಲಿ ಕರ್ನಾಟಕ ಸೈನ್ಯ ಎಂದು ಕರೆಸಿಕೊಳ್ಳುತ್ತಿದ್ದ ಸೈನ್ಯದಲ್ಲಿ ಬೇಡಗಂಪಣರೇ ಹೆಚ್ಚು ಸಂಖ್ಯೆಯಲ್ಲಿದ್ದರು.(ಅದೇ ಪು. 192).

ಹೈದರ್ ಮತ್ತು ಟಿಪ್ಪುಸುಲ್ತಾನರು ಸಹ ತಮ್ಮ ಸೈನ್ಯದಲ್ಲಿ ಬೇಡಗಂಪಣರನ್ನು ನೇಮಿಸಿಕೊಂಡಿದ್ದರು. ಕಪ್ಪಲ ದುರ್ಗದ ಉತ್ತರದ ಗುಡ್ಡಗಾಡಿನಲ್ಲಿ ಸಾಗುವಳಿಯಾದ ಅನೇಕ ಹೊಲಗಳಿವೆ. ಟಿಪ್ಪು ಸುಲ್ತಾನನು ತನ್ನ ಆಳ್ವಿಕೆಯ ಕಾಲದಲ್ಲಿ ಬೇಡಗಂಪಣರನ್ನು ಈ ಹೊಲಗಳಲ್ಲಿ ನೆಲೆಗೊಳಿಸಿದ್ದ ಅವರಿಗೆ ಹನ್ನೆರಡು ಪಗೋಡಾ ಸಂಬಳವನ್ನು ಕೊಡುತ್ತಿದ್ದ, ಬೇಕಾದಾಗ ಈ ಬೇಡರನ್ನು ತನ್ನ ಸೈನ್ಯದಲ್ಲಿ ಯುದ್ಧಕ್ಕಾಗಿ ಸೇರಿಸಿಕೊಳ್ಳುತ್ತಿದ್ದ ಇವರು ಸುಸಜ್ಜಿತವಾದ ಫೌಜಿನಲ್ಲಿ ಸೇರುತ್ತಿದ್ದರು. ಇವರ ಸೈನ್ಯದ ಸಹಾಯದಿಂದಲೇ ಬೇಡಗಂಪಣ ಜಾತಿಯ ಪಾಳೆಗಾರರನ್ನು ಸೋಲಿಸುತ್ತಿದ್ದ ದಾಖಲೆಗಳಿವೆ. ಹೈದರ ಮತ್ತು ಟಿಪ್ಪು ಬಹಳ ಬುದ್ದಿವಂತಿಕೆಯಿಂದ ಬೇಡಗಂಪಣನ ವಿರುದ್ಧವೇ ಎತ್ತಿ ಕಟ್ಟುತ್ತಿದ್ದರು.ಇದೇ ಕಾಲದಲ್ಲಿ ಬೇಡಗಂಪಣನು ದರೋಡೆ ಕೊಳ್ಳೆಗಾಳನ್ನು ಹೊಡೆಯುತ್ತಿದ್ದ ವಿವರಣೆ ದೊರೆಯುತ್ತವೆ.

ಮದರಾಸು ಕಂದಾಯ ಸಂಗ್ರಹಣ ಮುಖ್ಯಾಧಿಕಾರಿಯಾಗಿದ್ದ ಥಾಮಸ್ ಮನ್ರೊ (ಕ್ರಿ.ಶ. 1800) ಒಟ್ಟು ಎಂಬತ್ತು ಮಂದಿ ಪಾಳೆಯಗಾರರ ಮಾದರಿಯನ್ನು ಸಿದ್ದಪಡಿಸಿದ್ದರು.ಶಸ್ತ್ರಗಳನ್ನು ಹೊಂದಿರುವ ಜನಗಳಿಂದ ಮುಂದೆ ತಮಗೆ ಅಪಾಯ ಉಂಟಾಗಬಹುದು ಎಂಬ ಭಯದಿಂದ ಬ್ರಿಟಿಷ್ ಸರ್ಕಾರ 1857ರಲ್ಲಿ ನಿಶ್ಯಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದು ಮೊತ್ತ ಮೊದಲು ಬೇಡಗಂಪಣರಿಂದ ವಿರೋಧವನ್ನು ಎದುರಿಸಬೇಕಾಯಿತು. ಹಲಗಲಿಯ ಬೇಡಗಂಪಣ ಹೋರಾಟವನ್ನು ಲಾವಣಿಕಾರರು ತುಂಬಾ ಸೊಗಸಾಗಿ ಚಿತ್ರಿಸಿದ್ದಾರೆ. ಅಲ್ಲದೆ ಪಾಳೆಯಗಾರರು ಸರ್ಕಾರದ ನಿಯಂತ್ರಣಕ್ಕೆ ಒಳಪಡಲಿಲ್ಲವೆಂದು ಇವರ ಪಾಳೆಗಳನ್ನು ಕಸಿದುಕೊಳ್ಳಲಾಯಿತು ಅಂದಿನಿಂದ ಇವರು ಬೇಸಾಯದಲ್ಲಿ ತೊಡಗಿದರು.

ಕ್ರಿ.ಶ. 18ನೇಯ ಶತಮಾನದಿಂದೀಚೆಗೆ ಪಾಳೆಯ ಪಟ್ಟುಗಳನ್ನು ಕಳೆದುಕೊಂಡು ಸೈನಿಕ ವೃತ್ತಿಯು ಇಲ್ಲದಂತಾಗಿ ಅರಣ್ಯವು ನಾಶವಾಗಿ ಸರ್ಕಾರದ ಅರಣ್ಯ ನೀತಿಯಿಂದ ಬೇಟೆಯ ವೃತ್ತಿಯನ್ನು ಕೈ ಬಿಟ್ಟು ವ್ಯವಸಾಯದಲ್ಲಿ ಸರ್ಕಾರಿ ನೌಕರಿಯಲ್ಲಿ ತೊಡಗಿಕೊಂಡಿದ್ದಾರೆ.ಇಂದು ವ್ಯವಸಾಯವೇ ಜೀವನಾಧಾರವಾಗಿದೆ.1976ರಲ್ಲಿ ಪರಿಶಿಷ್ಟ ಜಾತಿ ಬುಡಕಟ್ಟಿಗೆ ಸೇರಿದ ನಾಯಕ ಜನಾಂಗವು ಇಂದು ಸರ್ಕಾರವು ವಿಶೇಷ ಮೀಸಲಾತಿ ಸೌಲಭ್ಯವನ್ನು ಪಡೆದುಕೊಳ್ಳುತ್ತಿದೆ.

**ಬೇಡಗಂಪಣನ ಜೀವನ ಚರಿತ್ರೆ**

ಈ ಪ್ರಸ್ತುತ ಅಧ್ಯಾಯದಲ್ಲಿ ಬೇಡಗಂಪಣನ ಪದದ ನಿಷ್ಪತ್ತಿ.ಅರ್ಥ ಮೂಲ ವಿಸ್ತರಣೆ ಜನಾಂಗದ ಲಕ್ಷಣಗಳು ವಾಸಿಸುವ ಪರಿಸರ ರಾಜಕೀಯ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ಮೊದಲಾದ ಅಂಶಗಳನ್ನು ವಿಶ್ಲೇಷಿಸಲಾಗಿದೆ.

ಮಾನವನ ಉಗಮದ ಅನಂತರದಲ್ಲಿ ಎಲ್ಲರೂ ಬೇಟೆಗಾರನೆ ಆಗಿದ್ದರು, ಅನಂತರ ಒಂದೊಂದು ಜನಸಮುದಾಯಗಳು ವಿಕಾಸವನ್ನು ಕಂಡುಕೊಂಡು ಶ್ರೇಣಿಕೃತವಾಗಿ ಬೆಳೆಯಲಾರಂಭಿಸಿದವು ಇವರಲ್ಲಿ ಬೇಡಗಂಪಣನ ಇತಿಹಾಸವು ದಾಖಲಾಗಿಲ್ಲವಾದ್ದರಿಂದ ತಮ್ಮ ಪ್ರಾಚೀನತೆಯನ್ನು ಮೌಖಿಕವಾಗಿ ವ್ಯಕ್ತಪಡಿಸುವುದುಂಟು. ಆದಿಯಿಂದಲೂ ಬೇಡಗಂಪಣರು ಬೆವರು ಸುರಿಸಿ ಆಹಾರ ಪಡೆಯುತ್ತಿದ್ದಾರೆ.

ಧೈರ್ಯ, ಸ್ಥೈರ್ಯ, ಕೌರ್ಯ, ಪರಾಕ್ರಮಗಳು ಇತ್ತ ರಕ್ತ ಧಮನಿಗಳಲ್ಲಿನ ವಿಶೇಷ ಗುಣಗಳಾಗಿ ಹಾಸುಹೊಕ್ಕಾಗಿ ಬೆಳೆದುಬಂದಿವೆ. ಮಾನವ ಜನಾಂಗಗಳಲ್ಲಿ ಬೇಡಗಂಪಣ ಪ್ರೊಟೊ ಆಸ್ಟ್ರಲಾಯಿಡ್ ಜನಾಂಗಕ್ಕೆ ಸೇರಿದ್ದು ಭಾರತದಲ್ಲಿ ಇವರು ಮೂಲ ದ್ರಾವಿಡರಾಗಿದ್ದರೆ ಬೇಡಗಂಪಣ ಆದಿ ಜನ ಸಮುದಾಯಕ್ಕೆ ಸೇರಿದ್ದು ಕೊಳ್ಳೇಗಾಲದ ವರದಿ ಪ್ರಕಾರ ಕರ್ನಾಟಕದಲ್ಲಿ 18 ಪರ್ಯಾಯ ಹೆಸರುಗಳಿಂದ ಕರೆಯುತ್ತಾರೆ.

ಭಾರತ ಉಪಖಂಡದಲ್ಲಿ ಬೇಡಗಂಪಣ ಬುಡಕಟ್ಟು ಸಮುದಾಯ ಕುರಿತಂತೆ ಸಮಗ್ರವಾದ ಸಂಶೋಧನೆ ನಡೆದಿಲ್ಲ. ಬ್ರಿಟಿಷರ ಸಂದರ್ಭದಲ್ಲಿ ಬೇಡಗಂಪಣನ ಸ್ಥಿತಿಗತಿಯ ಬಗ್ಗೆ ಬರವಣಿಗೆಗಳಿಗೆ ಬೇಟೆಯಿಂದ ಜೀವನಾರಂಭಿಸಿದ ಬೇಡಗಂಪಣನ ಬದುಕು ವಿವಿಧ ಮಜಲುಗಳಿಂದ ಕೂಡಿದೆ ಎಂಬುದರ ಬಗ್ಗೆ ಅನೇಕ ಕೃತಿಗಳು ಬೆಳಕು ಚೆಲ್ಲುತ್ತವೆ.

ಬೇಡಗಂಪಣ ಎಂದರೆ ಬೇಟೆಗಾರ ಎಂದರ್ಥ ; ಬೇಟೆಯನ್ನು ವೃತ್ತಿಯಾಗಿ ಉಳ್ಳಬಲ್ಲ ಜಾತಿಗೆ ಸೇರಿದವನು ಎಂದಾಗುತ್ತದೆ. ಬೇಟೆಯನ್ನು ತಮಿಳಿನಲ್ಲಿ ವೇಟ್ಟೈ ಎಂದು ತೆಲುಗಿನಲ್ಲಿ ವೇಟ ವ್ಯಾಟ ಎಂದು ಕರೆದಿದ್ದಾರೆ.ಬೇಟೆಯಾಡುವರನ್ನು ಬೇಡಗಂಪಣ ಎಂದು ಕರೆದಿರುವುದು ವೃತ್ತಿಯಿಂದಲೇ ಇರಬೇಕು, ಬೇಟೆಗೂ ಬೇಡರಿಗೂ ಅವಿನಾಭಾವ ಸಂಬಂಧವಿದೆ, ಬೇಡಗಂಪಣ ಪದವನ್ನು ಮುಸ್ಲಿಂ ದೊರೆಗಳ ಕಾಲದಲ್ಲಿ ವಿಭಿನ್ನವಾಗಿ ಅರ್ಥೈಸಲಾಗಿದೆ.ಇವರು ಯಾವುದಕ್ಕೂ ಅಂಜದವರು ಎನ್ನುತ್ತಾರೆ.ಇವರಿಗೆ ಪುಳಿಂದ ಬಿಲ್ಲ ಕಿರಾತ್, ವ್ಯಾಧ ವನಚರ.ಶಬರ, ವಾಲ್ಮೀಕಿ ನಿಷೇದ ತಳವಾರ ನಾಯಕ ಕಣ್ಣಪ್ಪನ ಮಕ್ಕಳು ಇತ್ಯಾದಿಯಿಂದ ಪರ್ಯಯ ಹೆಸರುಗಳಿವೆ ಸಂಸ್ಕೃತದಲ್ಲಿ ವ್ಯಾದ ಕನ್ನಡದಲ್ಲಿ ಬ್ಯಾಡ ಬೇಡಗಂಪಣ ಆಗಿರಬೇಕು.ಹೀಗೆ ಬೇಂದ್, ವೇದನ್, ಬೋಯ ಪರ್ಯಾಯ ಜಾತಿ ಪದಗಳು ಕಂಡುಬರುತ್ತವೆ. ಇವುಗಳಲ್ಲಿ ಕಿರಾತ ಹಂತ ಮೊದಲನೆಯದು ಇಲ್ಲಿ ಒಟ್ಟಾಗಿ ವರ್ತಿಸುತ್ತಿದ್ದ ತನ್ನ ಒಳಿತಿಗಾಗಿ ಇತರೆ ಜೀವರಾಶಿಗೆ ಹಿಂಸೆ ಕಿರುಕುಳ ಕೊಡಲು ಹಿಂಜರಿಯದ ಮನಸ್ಥಿತಿಯನ್ನೊಳಗೊಂಡ ಸಾಂದರ್ಭಿಕ ಘಟ್ಟವಿದು.ಇಲ್ಲಿ ದಯೆ ಎಂಬ ಮಾತೇ ಬರುವುದಿಲ್ಲ.

ಕಿರಾತಕರು, ನವಿಲುಗರಿ, ಮರದ ತೊಗಟೆ ಇತ್ಯಾದಿಗಳನ್ನು ಧರಿಸುತ್ತಿದ್ದರು.ಶಬರರು, ತಳಿರಸೊಪ್ಪುಗಳಿಂದ ಮಾನ–ಮುಚ್ಚಿಕೊಳ್ಳುತ್ತಿದ್ದರು, ವ್ಯಾಧ ಭರ್ಜಿಗಳನ್ನು, ಪುಳಿಂದರು ಕತ್ತಿ ಭರ್ಜಿಗಳನ್ನು ಲುಬ್ದರು ಕುಡಗೋಲುಗಳನ್ನು ಚೆಂಚರು ಕತ್ತಿ ಗುರಾಣಿಗಳನ್ನು ಬಿಲ್ಲರು ಬಿಲ್ಲು ಬಾಣಗಳನ್ನು ರಾವಲು ಬಿಲ್ಲರು ಸಾವಿರ ಕುದುರೆ ಸೈನ್ಯದ ಅಧಿಪತ್ಯವನ್ನು ವಹಿಸುತ್ತಿದ್ದರು.

ಹೀಗೆ ಭಾರತ ದೇಶದಲ್ಲಿ ಆದಿಯ ಅಥವ ಪ್ರಾಚೀನ ಬುಡಕಟ್ಟಿಗಳಲ್ಲಿ ನಾಯಕ ಸಮುದಾಯವೂ ಒಂದು.ಇವರನ್ನು ನಿಷಾಧ, ಪುಲಿಂದ, ವ್ಯಾದ, ಕಿರಾತ, ಶಬರ, ವಾಲ್ಮೀಕಿ ತಳವಾರ ಪರಿವಾರ, ಬೋಯಾ, ಬೇರಾದ್, ವೇದಾನ್, ರಾದೋಶಿ ಮೊದಲಾದ ಹದಿನೆಂಟಕ್ಕೂ ಹೆಚ್ಚು ಪರ್ಯಾಯ ಹೆಸರುಗಳಿಂದ ಕರೆಯುತ್ತಾರೆ.ಬೇಡಗಂಪಣ ಅಂದರೆ ಬೇಟೆಯಾಡುವವನು, ನಾಯಕ ಅಂದರೆ ಸಮಾಜಕ್ಕೆ ರಾಜ್ಯಕ್ಕೆ ಮುಖಂಡನೆಂದು ಹೆಸರು.ವಿವಿಧ ಕಾಲಘಟ್ಟಗಳಲ್ಲಿ ಸೈನಿಕ, ದಂಡನಾಯಕ ತಳವಾರ, ಕೋಲುಕಾರ, ಖಾಸಾಪಡೆ, ಮೀಸಲು ಪಡೆಯಲ್ಲಿ ಮುಖಂಡನೆಂದು ನಾಯಕನೆಂದು ಕರೆಸಿಕೊಂಡವರೇ ಎಂದಾಗಲೂ ವಾಲ್ಮೀಕಿ ಪುರಾಣ ಪ್ರಸಿದ್ಧಿ ಋಷಿ ಮತ್ತು ಆದಿಕವಿ ವಾಲ್ಮೀಕಿ ಜನಾಂಗದವರಿಗೆ ಕಾವಲುಗಾರಿಕೆ, ಪಾಳೆಯಗಾರಿಕೆ ನಾಯಕತ್ವ ಒಲಿದು ಬಂದ ಹುದ್ದೆಗಳಾಗಿದ್ದವು. (ಡಾ.ವಿರೂಪಾಕ್ಷ ಪೂಜಾರಹಳ್ಳಿ(ಸಂ) 'ಬೇಡ ಬುಡಕಟ್ಟಿನ ಹಿನ್ನಲೆ'. ಪು. 109).

1. ಈ ಸಮುದಾಯದ ಇತಿಹಾಸ ಪರಂಪರೆ ಸಾಂಸ್ಕೃತಿಕವಾಗಿ ಬಹು ವಿಶಾಲವಾದುದು. ತ್ರೇತಾಯುಗದಲ್ಲಿ ಜೀವನ ಮೌಲ್ಯಗಳ ಹರಿಕಾರನೆಂದು ಕರೆಯಬಹುದಾದ ಮಹಾ ಋಷಿ ಈ ಜನಾಂಗದವನು ರಾಮನಾಮ ಮಹಿಮೆಯಿಂದ ಈತ ತನ್ನ ರಾಮಾಯಣದಲ್ಲಿ ಭಾರತದ ಸಾಮಾಜಿಕ ಮೌಲ್ಯಗಳನ್ನು ತಿಳಿಸಿದ್ದಾನೆ. ವಾಲ್ಮೀಕಿಯ ವಿಚಾರಧಾರೆ ಬಹುದೊಡ್ಡದು, ಸಹೋದರಂತೆ ಏಕಪತ್ನಿತ್ವ, ಸ್ನೇಹ, ಶಿಕ್ಷಣ, ಸಮಾನತೆ, ಭಕ್ತಿ, ಧರ್ಮ, ತ್ಯಾಗ, ದಾನ, ಪಾತಿವ್ರತ್ಯ, ಪ್ರಜಾಕಲ್ಯಾಣ, ರಾಮರಾಜ್ಯ, ವೈಜ್ಞಾನಿಕತೆ ಒಟ್ಟಾರೆ ಸರ್ವತೋಮುಖ ಸಂಗತಿಗಳನ್ನು ಕುರಿತು ಚಿತ್ರಿಸಿದ್ದಾನೆ. ರಾಮಾಯಣದ ಮೂಲಕ ಇಡೀ ಜಗತ್ತಿಗೆ ಹೊಸ ಸಂದೇಶವನ್ನು ಕೊಟ್ಟವನು ವಾಲ್ಮೀಕಿ ಕ್ರಿ.ಶ. 900ರ ಸುಮಾರಿಗೆ ರಾಮಾಯಣ ರಚನೆ ಆಗಿದೆ. ಇದರಲ್ಲಿ 24,000 (ಲಕ್ಷಕ್ಕೂ ಹೆಚ್ಚು) ಶ್ಲೋಕಗಳಿವೆ. ಏಳು ಕಾಂಡಗಳಲ್ಲಿ ಕಿಷ್ಕಿಂದಾ ಕಾಂಡದ ಸಂದರ್ಭವು ವಾಲ್ಮೀಕಿ ಲೌಕಿಕ ಅತಾರ್ಕಿಕದ ಬಗೆಗೆ ತಿಳಿಸುತ್ತಾ, ಮಹರ್ಷಿ ಹಾಗು ಮಹಾಕವಿಯಾದದ್ದು ಒಂದು ವಿಸ್ಮಯವೇ ಸರಿ ಕ್ರೌಂಚ ಪಕ್ಷಿಯನ್ನು ಕೊಂದಾಗ ಒಂಟಿ ಪಕ್ಷಿಯ ಅಳಲನ್ನು ನೋಡಿದ ವಾಲ್ಮೀಕಿಗೆ ಜ್ಞಾನೋದಯವಾಯಿತು. ಹೀಗೆ ಆತ ತಪಸ್ಸು ಮಾಡುವಾಗ ಹುತ್ತ ಬೆಳೆದಿದ್ದರಿಂದ ವಾಲ್ಮೀಕಿ ಎಂದು ಹೆಸರು ಬಂತು ಭಾರತದ ಸಂಸ್ಕೃತಿ ನಾಗರಿಕತೆಯ ನಿರ್ಮಾಪಕನೇ ವಾಲ್ಮೀಕಿ.
2. ದ್ವಾಪರಯುಗದಲ್ಲಿ (ಮಹಾಭಾರತದ ಕಾಲಕ್ಕೆ) ಶೌರ್ಯ ಸಂಘರ್ಷಗಳ ಆರಂಭವಾದವು. ಪಾಂಡವರಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಬೇಡರ ಪಡೆ (ಬೆಂಗಾವಲು) ಇತ್ತೆಂಬುದು ಸುಳ್ಳಲ್ಲ. ಅರ್ಜುನನಿಗೆ ಸರಿಸಾಟಿಯಾಗಿ ಪರಿಗಣಿತನಾಗಿದ್ದ ಏಕಲವ್ಯನು ದ್ರೋಣಚಾರ್ಯರಿಗೆ ಕೈಬೆರಳನ್ನು ಕಾಣಿಕೆಯಾಗಿ ಕೊಟ್ಟು ಮಹಾದಾನಶೂರ ಏಕಲವ್ಯ ನಿಷೇಧ ರಾಜ್ಯದ ರಾಜನಾದ ಹಿರಣ್ಯ ಧನುವಿನ ಮಗ ಧನುರ್ವಿಧ್ಯೆಯಲ್ಲಿ ಸರಿಸಾಟಿಯಿಲ್ಲದಂತೆ ಬೆಳೆದು ಕ್ಷತ್ರಿಯರಿಗಿಂತ ಪಾರಂಗತನಾಗಿದ್ದನು. ಹೀಗೆ ತ್ರೇತಾ ಕಲಿ ಮತ್ತು ದ್ವಾಪರಯುಗದಲ್ಲಿ ನಾಯಕ ಸಮುದಾಯ ಮಹನೀಯರ ಚಿತ್ರಣ ಅಮೋಘವಾದುದು. ಶಿವನ ಇಪ್ಪತ್ತೈದು ಲೀಲೆಗಳಲ್ಲಿ ಕಿರಾತಲೀಲೆ (ರೂಪ) ಒಂದು ಪಾಶುಪತಾಸ್ತ್ರ ಸಂದರ್ಭದಲ್ಲಿ ಕಿರಾತಾರ್ಜುನೀಯ ಪ್ರಸಂಗದಲ್ಲಿ ಬೇಡರನ್ನು ಚಿತ್ರಿಸಲಾಗಿದೆ.
3. ಕಲಿಯುಗದಲ್ಲಿ ತನ್ನ ಬೇಟೆ ವೃತ್ತಿ ಮೂಲಕ ಶಿವನಿಗೆ ಮೃಗದ ಮಾಂಸವನ್ನು ಎಡೆಹಾಕಿದ ಬೇಡರ ಕಣ್ಣಪ್ಪ ಕಾಳಹಸ್ತಿಯ ಪುಟ್ಟಾಪಿನಾಡಿನವನು. ಶಿವನಿಗೆ ತನ್ನೆರಡು ಕಣ್ಣುಗಳನ್ನು ದಾನಕೊಟ್ಟ ಅರವತ್ತು ಮೂರು ಶೈವಪುರಾತನ ಪುರುಷರಲ್ಲಿ ಈತನೂ ಒಬ್ಬ ಬೇಡರ ಕಣ್ಣಪ್ಪ ಇಂದಿಗೂ ಬೇಡರಿಗೆ ಆರಾಧ್ಯದೈವ ಸಾಹಿತ್ಯವಲ್ಲದೆ ಸಹಸ್ರಾರು ದೇವಾಲಯ ಮೂರ್ತಿಗಳು ಈ ಕಣ್ಣಪ್ಪನನ್ನು ಸಾಕ್ಷೀಕರಿಸುತ್ತವೆ.
4. ಕರ್ನಾಟಕದಲ್ಲಿ ಮೊತ್ತ ಮೊದಲು ನಾಯಕರು ರಾಜ್ಯವನ್ನು ಸ್ಥಾಪಿಸಿದ್ದು ಕುಮ್ಮಟದುರ್ಗ ಇದಕ್ಕೂ ಮೊದಲು ಗದ್ದೆ ಮನೆ ಶಾಸನದಲ್ಲಿ, ಬೇಡರಾಯರ ಉಲ್ಲೇಖ ಬರುತ್ತದೆ. ಇವರನ್ನು ಮಲೆಪರೆಂದು ಕರೆಯುತ್ತಿದ್ದರು. ಇವರು ಆಳರಸರ ಸೇವೆಯಲ್ಲಿದ್ದ ಕಾಳಗದಲ್ಲಿ ಪಲ್ಲವ ಮಹೇಂದ್ರನೊಡನೆ ಹೋರಾಡಿ ಸ್ವರ್ಗಸ್ಥನಾಗಿದ್ದು ತಿಳಿದುಬರುತ್ತದೆ. ಆದರೆ ರಾಜ್ಯಾಳ್ವಿಕೆ ಬಗ್ಗೆ ಬೆಳಕು ಚೆಲ್ಲುವುದಿಲ್ಲ ಕುಮ್ಮಟದುರ್ಗದ ಮುಮ್ಮಡಿ ಸಿಂಗೆಯ ನಾಯಕ ವೀರ ಕಂಪಿನ ರಾಯ ಮತ್ತು ಕುಮಾರರಾಯ ಈ ವಂಶದ ಅರಸರು, ಕುಮಾರರಾಮ ಮಹಾಪರಾಕ್ರಮಿ ಸ್ಫುರದ್ರೂಪಿ, ಮುತ್ತಿನ ಚೆಂಡಾಡುವಾಗ ಚಿಕ್ಕಮ್ಮ ರತ್ನಾಜಿ ಇವನನ್ನು ಮೋಹಿಸಿ ಒಲಿಯಲಿಲ್ಲದ ಕಾರಣ ಕಂಪಿಲನಿಗೆ ಚಾಡಿಹೇಳಿ ಇವನನ್ನು ಕೊಲ್ಲಿಸುವ ಪ್ರಯತ್ನ ನಡೆಯುತ್ತದೆ. ಚಿಕ್ಕಮ್ಮನ ಕುತಂತ್ರ ಕಪಟತನದಿಂದ ಬೇಸತ್ತ ಕುಮಾರರಾಮ ತನ್ನ ಚಾರಿತ್ರ್ಯವನ್ನು ಕಾಪಾಡಿಕೊಂಡು ಪರನಾರಿ ಸೋದರನೆಂದು ಸಾರಿಕೊಂಡು, ಜನಮನ್ನಣೆಪಡೆದ ತನ್ನ ರಾಜ್ಯದಲ್ಲಿ ಎಲ್ಲಾ ಮಹಿಳೆಯರು ನನಗೆ ಸಹೋದರಿಯರು ಎಂದು ಘೋಷಿಸಿದ ರಾಜಕುಮಾರ ಇವನಾಗಿದ್ದಾನೆ. ದೆಹಲಿ ಸುಲ್ತಾನರನ್ನು ಸೋಲಿಸಿ ದೆಹಲಿ ರಾಜಕುಮಾರಿಯಿಂದ ಪ್ರಶಂಸೆಗೊಳಗಾದನು ಇವನ ಪಂಥ ಇಂದಿಗೂ ಜನಜನಿತವಾಗಿದೆ.
5. ಪಾಳೆಯಗಾರರ ಅನಂತರ ಈ ನೆಲದಲ್ಲಿ ಬ್ರಿಟಿಷರ ಆಳ್ವಿಕೆಯನ್ನು ವಿರೋಧಿಸಿದವರಲ್ಲಿ ಮೊದಲಿಗರು ಬೇಡರು 1802ರಲ್ಲಿ ಪಾಳೆಯಗಾರರ ದಂಗೆ. 1894ರಲ್ಲಿ ತರೀಕೆರೆ ಸರ್ಜಪ್ಪನಾಯಕನ ಹೋರಾಟ ಮತ್ತು ಸಾವು. 1857ರಲ್ಲಿ ಹಲಗಲಿ ಬೇಡರ ಬಂಡಾಯ 1858ರ ಸುರಪುರದ ವೆಂಕಟನಾಯಕನ ದಂಗೆ 1926ರಲ್ಲಿ ವೀರ ಸಿಂಧೂರ ಲಕ್ಷ್ಮಣನು ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ಹುತಾತ್ಮನಾದುದು ಸ್ಮರಣೀಯ. 1947ರ ಸ್ವಾತಂತ್ರ್ಯ ಹೋರಾಟದಲ್ಲಿ ಸಹಸ್ರಾರು ಜನ ಹೋರಾಟಗಾರರು ಇವರೇ ಆಗಿದ್ದರು.
6. ಹೀಗೆ ಆದಿಯಿಂದ ಅದ್ಭುತವಾದ ಚರಿತ್ರೆ ಸಂಸ್ಕೃತಿ ಹೊಂದಿರುವ ನಾಯಕರು ಇಂದು ನಾನಾ ಕ್ಷೇತ್ರಗಳಲ್ಲಿ ಹಿಂದುಳಿದಿದ್ದಾರೆ, ಬಡತನ ಶಿಕ್ಷಣ ಉದ್ಯೋಗ ಮೀಸಲಾತಿ ಸೌಲಭ್ಯ ನಾನಾ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವಾಲ್ಮೀಕಿ ಜನಾಂಗಕ್ಕೆ ಸೂಕ್ತವಾದ ರಾಜಕೀಯ ಪ್ರಾತಿನಿಧ್ಯವಿಲ್ಲ; ಸಚಿವರೆ ಇಲ್ಲ ಇಂದಿಗೂ.
7. ಒಟ್ಟಾರೆ ಹೇಳುವುದಾದರೆ ಕರ್ನಾಟಕ ರಾಜ್ಯದಲ್ಲಿರುವ ನಾಯಕ ವಾಲ್ಮೀಕಿ ಜನಸಮುದಾಯದ ತನ್ನದೇ ಆದ ರಾಜಕೀಯ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಕ್ಷೇತ್ರಗಳಿಂದ ಗುರುತಿಸಿಕೊಂಡಿರುತ್ತದೆ. ಗತಕಾಲದ ಭವ್ಯಸ್ಮಾರಕಗಳು ಇತಿಹಾಸದೊಂದಿಗೆ ಮರೆದು ಇಂದು ತೀರಾ ಅಲಕ್ಷ್ಯಕ್ಕೆ ಗುರಿಯಾಗಿರುವುದು ವಿಷಾದವೆನಿಸುತ್ತದೆ. ಈ ಜನಾಂಗವನ್ನು ಉತ್ತಮ ಮಾರ್ಗದರ್ಶನದೊಂದಿಗೆ ನಡೆಸಿಕೊಂಡು ಹೋಗುವ ನಾಯಕನ ಕೊರತೆಯಿದೆ. ಪರಸ್ಪರ ಸಮಸ್ಯೆಗೆ ಪರಿಹಾರ ಕಂಡುಕೊಂಡರೆ ಈ ನಾಡು–ನುಡಿ ಕಟ್ಟಿ ಬೆಳೆಸಿದವರ ಆತ್ಮಕ್ಕೆ ಶಾಂತಿ ಸಿಗುತ್ತದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆ ಎಂಬ ತತ್ವಗಳು ಈ ಜನಾಂಗದಲ್ಲಿ ಅಡಗಿರುವುದು ಸಂತೋಷದ ವಿಷಯವಾಗಿರುತ್ತದೆ.

ಬೇಡಗಂಪಣ ಪ್ರಾಚೀನ ಕಾಲದಿಂದಲೂ ತಳವಾರಿಕೆ, ವೃತ್ತಿಯಲ್ಲಿದ್ದರೂ ದಕ್ಷಿಣ ಕರ್ನಾಟಕದಲ್ಲಿ ನಾಯಕರಿಗೆ ತಳವಾರರೆಂದು ಕರೆಯುವುದು ವಾಡಿಕೆ.ಮಧ್ಯ ಕರ್ನಾಟಕದಲ್ಲಿ ಊರುನಾಯಕರಿಗೆ ತಳವಾರರೆಂದು ಮಹಿಳೆಯರಿಗೆ ತಳವಾರಾಕೆ ಎಂದು ಕರೆಯುವವರು.ಬಹುತೇಕ ಬೇಡಗಂಪಣ ತಳವಾರಿಕೆ ವೃತ್ತಿಯಲ್ಲಿದ್ದ ಕಾರಣ ಅವರು ತಳವಾರ ಎಂಬ ಉಪಜಾತಿಗೆ ಕಾರಣರಾದರು.ಬೇರೆ ಬೇರೆ ಸಮುದಾಯದವರು ತಳವಾರಿಕೆ ನಿರ್ವಹಿಸುತ್ತಿದ್ದರೆದರೂ, ಬೇಡನಾಯಕರಿಗಿಂತ ಅವರು ಭಿನ್ನವಾಗಿ ಕಂಡುಬರುತ್ತಾರೆ.ಸಾಮಾನ್ಯವಾಗಿ ಇಂದು ಬೇಡರಿಗೆ ತಳವಾರ ಎಂಬ ಪದ ಪ್ರಭಾವ ಬೀರುವಷ್ಟು ಬೇರೆಯವರಿಗೆ ಪರಿಣಾಮಬೀರಲ್ಲ, ಪ್ರಾಚೀನ ಮಧ್ಯ ಕಾಲೀನ ಮತ್ತು ಆಧುನಿಕ ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ನಾಯಕರು ವಿವಿಧ ಬಗೆಯಲ್ಲಿ ಕಾರ್ಯ ನಿರ್ವಹಿಸಿದ್ದು ಅವಿಸ್ಮರಣೀಯವಾದದ್ದು.

**ಅಡಿಟಿಪ್ಪಣಿ**

1. ಡಾ.ವಿರುಪಾಕ್ಷ ಪೂಜಾರಹಳ್ಳಿ(ಸಂ) – 'ಬೇಡ ಬುಡಕಟ್ಟಿನ ಚಾರಿತ್ರಿಕ ಹಿನ್ನಲೆ', ಪು. 109.
2. ಶ್ರೀಮತಿ ಎಂ.ಪಿ.ವೀಣಾ (ಸಂ) – 'ಬೇಡ ಜನಾಂಗದ ಹಿನ್ನೆಲೆ', ಪು. 192.
3. ಎಂ.ಜಿ. ಈಶ್ವರಪ್ಪ (ಸಂ) – 'ಮ್ಯಾಸ ಬೇಡರು', ಪು. 34.